ಅಧ್ಯಕ್ಷರು: ಅಯಿತು ಬಿಡಿ. ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಈಗ ಬಿ.ಸುರೇಶಗೌಡರವರ ಪ್ರಶ್ನೆ.

ಸಾಮಾಜಿಕ ಅರಣ್ಯ ಯೋಜನೆ

165(1939); ಶ್ರೀ ಸುರೇಶಗೌಡ.ಬಿ.(ತುಮಕೂರು ಗ್ರಾಮಾಂತರ)

ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹಸರೀಕರಣಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಇದಕ್ಕಾಗಿ ನಿಗದಿಗೊಳಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿ ಎಷ್ಟು;

ಇ) ಈವರೆಗೆ ಜಿಲ್ಲಾ ವ್ಯಾಪ್ತಿಯಲ್ಲಿ ಸಾಧಿಸಿರುವ ಗುರಿ ಎಷ್ಟು (ತಾಲ್ಲೂಕು ವಾರು ವಿವರ ನೀಡುವುದು)?

ಶ್ರೀ ಬಿ.ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹೆಸರೀಕರಣಕ್ಕಾಗಿ ನಿಗದಿಪಡಿಸಿದ ಅನುದಾನದ ವಿವರಗಳನ್ನು ಅನುಬಂಧ–1 ನೀಡಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011–12ರಿಂದ 2013–14ನೇ ಸಾಲಿನವರೆಗೆ ತಾಲ್ಲೂಕುವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಅನುಬಂಧ–2 ನೀಡಲಾಗಿದೆ.

ಇ) ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011–12ರಿಂದ 2013–14ನೇ ಸಾಲಿನವರೆಗೆ ತಾಲ್ಲೂಕುವಾರು ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಸಾಧನೆಯನ್ನು ಅನುಬಂಧ–3ರಲ್ಲಿ ನೀಡಲಾಗಿದೆ.

ಅನುಬಂಧ–1

2011–12 ಸಾಲಿನಿಂದ 2013–14ನೇ ಸಾಲಿನವರೆಗೆ ಸಾಮಾಜಿಕ ಅರಣ್ಯ ಯೋಜನೆಯಡಿ ನಿಗಧಿಪಡಿಸಿರುವ ಹಣದ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ	ವಿಭಾಗ	ತಾಲ್ಲೂಕು	2011–12 ವಿಶೇಷ ಅಭಿವೃಧಿ ಯೋಜನೆ	2012–13 ಸಾಮಾಜಿಕ ಅರಣ್ಯ ಯೋಜನೆ	2013–14 ಸಾಮಾಜಿಕ ಅರಣ್ಯ ಯೋಜನೆ	ಒಟ್ಟು
1	2	3	4	5	6	7
1	ತುಮಕೂರು ಸಾಮಾಜಿಕ ಅರಣ್ಯ ವಿಭಾಗ	ತುಮಕೂರು		34.06	8.45	42.51
2		ಕೊರಟಗೆರೆ	15.977	9.72	19.60	45.30
3		ಶಿರಾ	25.376	2.70	18.43	46.51
4		ಮಧುಗಿರಿ	24.436	4.98	25.64	55.05

5		ಪಾವಗಡ	26.313	3.55	16.84	46.71
6		ಕುಣಿಗಲ್	19.737	2.27	10.40	32.41
7		ಗುಬ್ಬಿ	25.376	2.00	19.88	47.26
8		ತಿಪಟೂರು		24.28	11.60	35.88
9		ತುರುವೇಕೆರೆ	13.158	4.23	14.93	32.32
10		ಚಿ.ನಾ.ಹಳ್ಳಿ	15.977	3.21	19.23	38.41
ಒಟ್ಟು			166.35	90.993	165.000	422.343

- 2011–12 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯು (ಎಸ್.ಡಿ.ಪಿ.) ಅನುಷ್ಠಾನದಲ್ಲಿದ್ದು, 2012–13ರ ನಂತರ ಈ ಯೋಜನೆಯನ್ನು ಸಾಮಾಜಿಕ ಅರಣ್ಯ ಯೋಜನೆಯಾಗಿ ಮಾರ್ಪಾಡು ಮಾಡಲಾಗಿರುತ್ತದೆ.

ಅನುಬಂಧ–2

ಸಾಮಾಜಿಕ ಅರಣ್ಯ ಯೋಜನೆಯಡಿ 2011–12ನೇ ಸಾಲಿನಿಂದ 2013–14ನೇ ಸಾಲಿನವರೆಗೆ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿ

ಕ್ರಸಂ	ವಿಭಾಗ	ತಾಲ್ಲೂಕು	2011–12 ವಿಶೇಷ ಅಭಿವೃದ್ಧಿ ಯೋಜನೆ			2012–13 ಸಾಮಾಜಿಕ ಅರಣ್ಯ ಯೋಜನೆ			2012–14 ಸಾಮಾಜಿಕ ಅರಣ್ಯ ಯೋಜನೆ		
			ಭೌತಿಕ ಗುರಿ(ಹೆಕ್ಟೇರಗಳಲ್ಲಿ)		ಆರ್ಥಿಕಗುರಿ (ರೂ. ಲಕ್ಷಗಳಲ್ಲಿ)	ಭೌತಿಕ ಗುರಿ(ಹೆಕ್ಟೇರಗಳಲ್ಲಿ)		ಆರ್ಥಿಕ ಗುರಿ (ಲಕ್ಷಗಳಲ್ಲಿ)	ಭೌತಿಕ ಗುರಿ (ಹೆಕ್ಟೇರಗಳಲ್ಲಿ		ಆರ್ಥಿಕ ಗುರಿ(ರೂ. ಲಕ್ಷಗಳಲ್ಲಿ)
			ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ		ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ		ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ	
	2	3	4	5	6	7	8	9	10	11	12
1	ತುಮಕೂರು ಸಾಮಾಜಿಕ ಅರಣ್ಯ ವಿಭಾಗ	ತುಮಕೂರು	–	–	–	–	–	34.060	12	–	8.450
2		ಕೊರಟಗೆರೆ	30	67	15.977	40	48	9.719	30	70	19.600
3		ಶಿರಾ	35	151	25.376	30	65	2.700	27	65	18.430
4		ಮಧುಗಿರಿ	50	84	24.436	30	83	4.975	30	80	25.636
5		ಪಾವಗಡ	25	173	26.313	32	51	35.54	27	57	16.842
6		ಕುಣಿಗಲ್	31	79	19.737	30	55	22.69	18	55	10.400
7		ಗುಬ್ಬಿ	40	136	25.376	30	73	20.00	33	70	19.884
8		ತಿಪಟೂರು	–	–	–	–	–	24.280	23	–	11.600
9		ತುರುವೇಕೆರೆ	15	71	13.158	30	28	42.30	28	45	14.929
10		ಚಿ.ನಾ.ಹಳ್ಳಿ	20	89	15.977	36	30	32.06	33	56	19.229
		ಒಟ್ಟು	246	850	1.66.350	258	433	90.993	261	498	1.65.000

*2011–12 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯು (ಎನ್.ಡಿ.ಪಿ) ಅನುಷ್ಠಾನದಲ್ಲಿದ್ದು, 2012–13ರ ನಂತರ ಈ ಯೋಜನೆಯನ್ನು ಸಾಮಾಜಿಕ ಅರಣ್ಯ ಯೋಜನೆಯಾಗಿ ಮಾರ್ಪಾಡು ಮಾಡಲಾಗಿರುತ್ತದೆ.

ಅನುಬಂಧ–3

ಸಾಮಾಜಿಕ ಅರಣ್ಯ ಯೋಜನೆಯಡಿ 2011–12ನೇ ಸಾಲಿನಿಂದ 2013–14ನೇ ಸಾಲಿನವರೆಗೆ ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಪ್ರಗತಿ

ಕ್ರ.ಸಂ	ವಿಭಾಗ	ತಾಲ್ಲೂಕು	2011–12 ವಿಶೇಷ ಅಭಿವೃದ್ಧಿ ಯೋಜನೆ			2012–13 ಸಾಮಾಜಿಕ ಅರಣ್ಯ ಯೋಜನೆ			2013–14 ಸಾಮಾಜಿಕ ಅರಣ್ಯ ಯೋಜನೆ		
			ಭೌತಿಕ ಸಾಧನೆ (ಹೆಕ್ಟೇರಗಳಲ್ಲಿ)		ಆರ್ಥಿಕ ಸಾಧನೆ (ರೂ. ಲಕ್ಷ ಗಳಲ್ಲಿ)	ಭೌತಿಕ ಸಾಧನೆ (ಹೆಕ್ಟೇರಗಳಲ್ಲಿ)		ಆರ್ಥಿಕ ಸಾಧನೆ (ರೂ. ಲಕ್ಷ ಗಳಲ್ಲಿ)	ಭೌತಿಕ ಸಾಧನೆ (ಹೆಕ್ಟೇರಗಳಲ್ಲಿ)		ಆರ್ಥಿಕ ಸಾಧನೆ (ರೂ. ಲಕ್ಷ ಗಳಲ್ಲಿ)
			ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ		ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ		ನೆಡುತೋಪು ನಿರ್ಮಾಣ	ನೆಡುತೋಪು ನಿರ್ವಹಣೆ	
1	2	3	4	5	6	7	8	9	8	9	11
1	ತುಮಕೂರು ಸಾಮಾಜಿಕ ಅರಣ್ಯ ವಿಭಾಗ	ತುಮಕೂರು	–	–	–	–	–	33.980	12	–	8.422
2		ಕೊರಟಗೆರೆ	30	67	15.976	40	48	9.719	30	70	19.582
3		ಶಿರಾ	35	151	25.36	30	65	2.700	27	65	18.413
4		ಮಧುಗಿರಿ	50	84	24.436	30	83	4.975	30	80	25.636
5		ಪಾವಗಡ	25	173	26.309	32	51	3.554	27	57	16.842
6		ಕುಣಿಗಲ್	31	79	19.73	30	55	2.269	18	55	10.382
7		ಗುಬ್ಬಿ	40	136	25.372	30	73	2.000	33	70	19.884

8		ತಿಪಟೂರು	–	–	–	–	–	24.280	23		11.576
9		ತುರುವೇಕೆರೆ	75	71	13.102	30	28	4.230	28	45	14.868
10		ಚಿ.ನಾ.ಹಳ್ಳಿ	20	89	15.974	36	30	3.206	33	56	19.229
ಒಟ್ಟು			246	850	1.66.259	258	433	90.913	261	498	1.64.834

- 2011–12 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯು (ಎನ್.ಡಿ.ಪಿ) ಅನುಷ್ಠಾನದಲ್ಲಿದ್ದು, 2012–13ರ ನಂತರ ಈ ಯೋಜನೆಯನ್ನು ಸಾಮಾಜಿಕ ಅರಣ್ಯ ಯೋಜನೆಯಾಗಿ ಮಾರ್ಪಾಡು ಮಾಡಲಾಗಿರುತ್ತದೆ.

ಅಧ್ಯಕ್ಷರು: ಹೆಚ್.ಡಿ.ರೇವಣ್ಣ ಇಲ್ಲ, ಶಿವಲಿಂಗೇಗೌಡರು ಇಲ್ಲ.

ಶ್ರೀ ಸುರೇಶ್ ಗೌಡ.ಬಿ: ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹಸರೀಕರಣಕ್ಕಾಗಿ ಎಷ್ಟು ಹಣ ನಿಗದಿಪಡಿಸಲಾಗಿದೆ ಎಂದು ಕೇಳಿದ್ದೇನೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಹಸರೀಕರಣ ಎಷ್ಟಾಗಿದೆ ಎಂದರೆ, ಬಹಳ ಕಡಿಮೆ ಸಂಖ್ಯೆಯಲ್ಲಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಆದರೆ ತುಮಕೂರು (ಗ್ರಾ) ಮತ್ತು ವಿಧಾನ ಸಭಾ ಕ್ಷೇತ್ರಕ್ಕೆ ಸುಮಾರು 34 ಲಕ್ಷ ಹಣವನ್ನು ಕೊಟ್ಟಿದ್ದಾರೆ. ಆದರೆ ಒಂದೂ ಗಿಡವನ್ನು ಹಾಕಿಲ್ಲ, ಹಸರೀಕರಣ ಮಾಡಿಲ್ಲವೆಂದು ಎಷ್ಟು ಹೆಕ್ಟೇರ್ ನಲ್ಲಿ ಮಾಡಿದ್ದೀರೆಂದು ಕೇಳಿದರೆ ಶೂನ್ಯ ತೋರಿದ್ದಾರೆ. ಆ ಹಣವೇನಾಯಿತು ಎನ್ನುವುದು ನನ್ನ ಪ್ರಶ್ನೆ. ಎರಡನೇ ಪ್ರಶ್ನೆ ಈ ಮೂರು ವರ್ಷದಲ್ಲಿ ಹಾಕಿದ ಗಿಡಗಳು ಎಷ್ಟಿವೆ ಎಂದು ಕೇಳಿದರೆ, ಗಿಡಗಳ ಸಂಖ್ಯೆಯನ್ನೂ ಸಹ ಕೊಟ್ಟಿಲ್ಲ. ಆ ಗಿಡಗಳು ಏನಾಗಿದೆ? ಹಸರೀರಣ ನಿಜವಾಗಿಯೂ ಆಗುತ್ತಿದೆಯೇ ಆ ಹಣ ದುರುಪಯೋಗವಾಗುತ್ತಿದೆಯಾ ಎನ್ನುವುದು ನನ್ನ ಪ್ರಶ್ನೆಯಾಗಿದೆ, ಸಚಿವರಿಂದ ದಯವಿಟ್ಟು ಉತ್ತರ ಕೊಡಿಸಿ ಬಿಟ್ಟರೆ ಸಮಾಧಾನವಾಗುತ್ತೇನೆ.

ಅಧ್ಯಕ್ಷರು: ದಯವಿಟ್ಟು ಎಂದು ಏತಕ್ಕೆ ಹೇಳುತ್ತೀರಿ, ಉತ್ತರ ಕೊಡಬೇಕೆಂದು ಕೇಳಿ ಅಷ್ಟೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸುರೇಶ್ ಗೌಡರು, ಸಾಮಾಜಿಕ ಅರಣ್ಯದಲ್ಲಿ ನೆಡುತೋಪುಗಳನ್ನು ನೆಟ್ಟಿದ್ದಾರೆ ಅದು ಎಷ್ಟು ಬದುಕಿದೆ ನಂಬರ್ ಕೊಡಬೇಕೆಂದು ಹೇಳಿದ್ದಾರೆ. ಬಹುಶಃ ಎಲ್ಲವನ್ನೂ ಪೂರ್ಣಪ್ರಮಾಣದಲ್ಲಿ ನಿಖರವಾಗಿ ಹೇಳುವುದಕ್ಕೆ ನಮಗೆ ಕಷ್ಟವಾಗಬಹುದು. ಆದರೆ ಸಾಮಾನ್ಯವಾಗಿ ಇಷ್ಟು Percentage ಎಂದು ಏನೇನು ಆಗಿದೆ ಎಂದು evaluation ಮಾಡುವಂಥ ಕಾರ್ಯಕ್ರಮವೂ ಕೂಡ ಆಗಿದೆ. ಸುಮಾರು 65–70% ಸಸಿಗಳು ಉಳಿದಿವೆ ಎಂದು ಕೊಟ್ಟಿದ್ದೇವೆ. ಆದರೂ ಕೂಡ ತಾವೇನು ಆತಂಕವನ್ನು ವ್ಯಕ್ತಪಡಿಸಿದ್ದೀರಿ, ಕಳೆದ 3 ವರ್ಷ

ಎಂದು ಹೇಳಿದಿರಿ. ಆದುದರಿಂದ ಮುಂದಿನ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ತಾವು ಏನು ಆತಂಕವನ್ನು ವ್ಯಕ್ತಪಡಿಸುತ್ತೀರಿ, ಏನಾದರೂ ಅಂಥ ಸಮಸ್ಯೆಗಳಿದ್ದರೆ, ಹಿರಿಯ ಅಧಿಕಾರಿಗಳಿಂದ ಪರಶೀಲನೆ ಮಾಡಿ, ಏನು ತೊಂದರೆ ಆಗಿದೆ ಅದನ್ನು ಸರಿಪಡಿಸತಕ್ಕಂಥ ಮತ್ತು ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಸುರೇಶ್ ಗೌಡ ಬಿ: 3 ವರ್ಷಗಳಲ್ಲಿ ಸುಮಾರು 4 ಕೋಟಿ 22 ಲಕ್ಷ ಜಿಲ್ಲೆಯಲ್ಲಿ ಖರ್ಚು ಮಾಡಿದ್ದಾರೆ. ಇವರು ಗಿಡಗಳನ್ನು ಹಾಕುತ್ತಾರೆ, 3 ವರ್ಷವಾದ ಮೇಲೆ ಆ ಗಿಡಗಳನ್ನು ನಿರ್ವಹಣೆ ಮಾಡುವುದಿಲ್ಲ.

ಅಧ್ಯಕ್ಷರು: ನಿಮ್ಮ ಪ್ರಶ್ನೆ ಏನಿದೆ ಹೇಳಿ, ವ್ಯಾಖ್ಯಾನ ಬೇಡ.

ಶ್ರೀ ಬಿ.ರಮಾನಾಥ ರೈ: ಏನು ಸುರೇಶ್ ಗೌಡರ ಆತಂಕವಿದೆ, ನಾನು ಕೂಡ ಅದನ್ನು ಪರಿಶೀಲನೆ ಮಾಡಿ, ಸರಿಪಡಿಸುವ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು: ಮಾಡಿ, ನಿಮಗೆ [ಸದಸ್ಯರು] ನಿರ್ದಿಷ್ಟವಾಗಿ ಏನಾದರೂ ಇದ್ದರೆ ತಿಳಿಸಿ.

ಶ್ರೀ ಸುರೇಶ್ ಗೌಡ ಬಿ: ಮಾನ್ಯ ಅಧ್ಯಕ್ಷರೆ, Eucalyptus ನೀಲಗಿರಿ ಮರಗಳೇನಿವೆ, ಸಾಕಷ್ಟು ಸಾಮಾಜಿಕ ಅರಣ್ಯದಲ್ಲಿ ಹಾಕಿದ್ದಾರೆ.

ಅಧ್ಯಕ್ಷರು: ಇದು ವ್ಯಾಖ್ಯಾನ, ಇದು ಚರ್ಚೆ ಸಂದರ್ಭವಲ್ಲ, ಪ್ರಶ್ನೆ ಸಂದರ್ಭ, ನಿಮಗೇನು ಸಂಶಯ ಬಂದಿದೆ, ಅದರ ನಿವಾರಣೆಗೆ ಉಪ ಪ್ರಶ್ನೆ ಕೇಳಿ.

ಶ್ರೀ ಸುರೇಶ್ ಗೌಡ ಬಿ: ಸರ್, 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಗಿಡಗಳು ಒಂದೂ ಕಾಣಿಸುತ್ತಿಲ್ಲ, ನೀವು ಫೆನ್ಸ್ ಹಾಕುವುದಿಲ್ಲ.

ಅಧ್ಯಕ್ಷರು: ಇಲ್ಲಿ ಕೇಳಿ, ನಿಮ್ಮ ಗಮನಕ್ಕೆ ನೆಟ್ಟ ಗಿಡಗಳು ಇಲ್ಲವೆಂದು ಬಂದಿದ್ದರೆ, ಯಾವ ಪ್ಲಾಟ್‌ನಲ್ಲಿ, ಯಾವ ಗ್ರಾಮದಲ್ಲಿ ಇದು ನಡೆದಿದೆ ಎಂದು ಕೇಳಿ.

ಶ್ರೀ ಸುರೇಶ್ ಗೌಡ.ಬಿ: ಅದೇ ನನ್ನ ಪ್ರಶ್ನೆ, ಹಾಕಿರುವ ಗಿಡಗಳು ಕಾಣಿಯಾಗಿವೆ, ಅದಕ್ಕೆ ಫೆನ್ಸ್, ಕಾಂಪೌಂಡ್ ಹಾಕಿ, ಮುಳ್ಳುತಂತಿಗಳನ್ನೆ ಹಾಕಿ ಎಂದಷ್ಟೆ ನಾನು ಅವರಿಗೆ ಕೇಳುತ್ತೇನೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಸುರೇಶ್ ಗೌಡರು ಹೇಳಿರುವುದನ್ನು ಪರಿಶೀಲನೆ ಮಾಡಿ ಏನು ಸೂಕ್ತ ಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ, ಒಂದು ವೇಳೆ ಯಾರು ತಪ್ಪು ಮಾಡಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಸಂಜಯ್ ಬಿ.ಪಾಟೀಲ್ ಇಲ್ಲ.

ಮಲಪ್ರಭಾ ನದಿಯಲ್ಲಿ ಹೊಳೆತ್ತುವುದು

155(1828); ಶ್ರೀ ವಿಶ್ವನಾಥ್ ಈ ಪಾಟೀಲ್ (ಬೈಲಹೊಂಗಲ)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮಲಪ್ರಭಾ ನದಿಯ ಎರಡು ಬದಿಯಲ್ಲಿ ತುಂಬಿಕೊಂಡಿರುವ ಮಣ್ಣಿನ ಹೂಳೆತ್ತುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ:

ಆ) ಹಾಗಿದ್ದಲ್ಲಿ, ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮಲಪ್ರಭಾ ನದಿಯ ಎರಡು ಬದಿಯಲ್ಲಿ (ಜಲಾಶಯದ ಹಿನ್ನೀರಿನ ಪ್ರದೇಶಲ್ಲಿ) ಹೂಳು ತುಂಬಿರುವ ಬಗ್ಗೆ ಮಾಹಿತಿಯು ಸರಕಾರದ ಗಮನಕ್ಕೆ ಬಂದಿರುತ್ತದೆ. ಮಲಪ್ರಭಾ ನದಿಯ ಎರಡೂ ಬದಿಯಲ್ಲಿ (ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ) ತುಂಬಿರುವ ಮಣ್ಣಿನ ಬಗ್ಗೆ ವಿವರವಾಗಿ ಪರಿಶೀಲಿಸಿ ಸರ್ವೆ ಕಾರ್ಯ ಕೈಗೊಂಡ ಹೂಳಿನ ನಿಖರ ವಾದ ಮಾಹಿತಿಯನ್ನು ಅಂದಾಜಿಸಿ ಸೂಕ್ತ ಪ್ರಸ್ತಾವನೆಯನ್ನು ತಯಾರಿಸಿ ಸೂಕ್ತ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಮುಖ್ಯ ಇಂಜಿನಿಯರ್